# ಶ್ರೀಮಾತೆಯವರು : ನಾನು ಕಂಡಂತೆ

ಬಂಗಾಳಿ ಮೂಲ : **ಸ್ವಾಮಿ ಭೂಮಾನಂದ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

**ಭಾಗ ೫**



ಇಂದು ೧೯೨೦ರ ಶ್ರಾವಣ ಮಾಸದ ನಾಲ್ಕನೇ ದಿನ. ಸೂರ್ಯೋದಯವಾಗುತ್ತಲೇ ಬೇಲೂರು ಮಠ ಹಾಗೂ ನಾನಾ ಸ್ಥಳಗಳಿಂದ ಸಾಧುಗಳು ಹಾಗೂ ಭಕ್ತರುಗಳು ಗುಂಪುಗುಂಪಾಗಿ ಶ್ರೀಮಾತೆಯವರ ದರ್ಶನ ಮಾಡಲು ಬರುತ್ತಿದ್ದರು. ಎಲ್ಲರ ಮುಖದಲ್ಲಿಯೂ ಉದ್ವೇಗದ ಚಿಹ್ನೆ; ಎಲ್ಲರೂ ಕಲ್ಲಿನಂತಾಗಿದ್ದರು. ಅಷ್ಟೊಂದು ಜನರು ಬಂದು ಸೇರಿದ್ದಾರೆ, ಆದರೂ 'ಉದ್ಬೋಧನ'ದಲ್ಲಿ ಒಂದಿನಿತೂ ಸದ್ದಿಲ್ಲ. ಮೌನವಾಗಿ ಎಲ್ಲರೂ ತಮ್ಮ ತಮ್ಮ ಕೆಲಸಗಳನ್ನು ಯಂತ್ರದ ಹಾಗೆ ಮಾಡುತ್ತಿದ್ದಾರೆ. ಇಂದು ರಾತ್ರಿಯಾದರೂ ಕಳೆದೀತೋ ಇಲ್ಲವೋ ಎಂಬ ಆಸೆ ಕೂಡ ನಮ್ಮಲ್ಲಿ ಅನೇಕರಿಗೆ ಇದ್ದಿರಲಿಲ್ಲ. ನಿಧಾನವಾಗಿ ಸೂರ್ಯಾಸ್ತವಾಯಿತು. ಕತ್ತಲಾಗುತ್ತಿದ್ದಂತೆ ಶ್ರೀಮಾತೆಯವರ ಪರಿಸ್ಥಿತಿ ತುಸು ಸ್ಥಿರಗೊಂಡಿತು. ರಾತ್ರಿ ಒಂದು ಗಂಟೆಯ ಸಮಯಕ್ಕೆ ಶ್ರೀಮಾತೆಯವರು ಕೈಲಾಸವಾಸಿಯಾದರು. ಅವರನ್ನು ಕಣ್ಣೆದುರಿಗೆ ನೋಡಿ 'ಅಮ್ಮಾ' ಎಂದು ಕರೆಯುವ ಭಾಗ್ಯ ಚಿರಕಾಲದ ಮಟ್ಟಿಗೆ ಇಲ್ಲದಾಯಿತು.

ಮರುದಿನ ಹತ್ತು ಗಂಟೆಯ ಹೊತ್ತಿಗೆ ಶರತ್ ಮಹಾರಾಜ್ ಶ್ರೀಮಾತೆಯವರ ದೇಹವನ್ನು ಬೇಲೂರು ಮಠಕ್ಕೆ ಕರೆತಂದರು. ಮೂರು ಗಂಟೆಯ ಹೊತ್ತಿಗೆ ಎಲ್ಲ ಕಾರ್ಯಗಳೂ ಸಂಪೂರ್ಣಗೊಂಡಾಗ, ಒಂದು ಬಾರಿ ನೆಲವನ್ನೆಲ್ಲ ಒದ್ದೆ ಮಾಡುವಂತೆ ಜೋರಾಗಿ ಮಳೆ ಸುರಿದು, ಭೂಮಿಯೆಲ್ಲ ತಂಪಾಯಿತು. ಕತ್ತಲಾಗುವ ಮೊದಲು ಶರತ್ ಮಹಾರಾಜ್ 'ಉದ್ಬೋಧನ'ದ ಎಲ್ಲರನ್ನೂ ಕರೆದುಕೊಂಡು ಹಿಂದಿರುಗಿ ಬಂದರು.

ಶ್ರೀಮಾತೆಯವರ ಮಹಾಸಮಾಧಿಯ ನಂತರ ಒಂದು ದಿನ ರಾಜಾ ಮಹಾರಾಜರು ಬಲರಾಮಬಾಬುವಿನ ಮನೆಯಿಂದ ಸುತ್ತಾಡುತ್ತಾ 'ಉದ್ಬೋಧನ'ಕ್ಕೆ ಬಂದರು. ಶರತ್ ಮಹಾರಾಜರು ಮೊದಲು ರಾಜಾ ಮಹಾರಾಜರ ಪಾದ ಮುಟ್ಟಿ ನಮಸ್ಕರಿಸಿ, ಬಳಿಕ ಹೇಳಿದರು: ''ಮಹಾರಾಜ್! ಶ್ರೀಮಾತೆಯವರಿಗೆ ಕಾಯಿಲೆಯಾಗಿದ್ದಾಗ ಒಂದು ದಿನ ಅವರು ಕಡಲೆಪುರಿ ಮತ್ತು ಹುರಿಗಡಲೆ ತಿನ್ನಲು ಕುಳಿತಿದ್ದರು; ಆ ವಾರ್ತೆ ತಿಳಿದು ನಾನು ಅಲ್ಲಿಗೆ ಹೋಗಿ, ಅವರಿಂದ ಅದನ್ನು ಭಿಕ್ಷೆಯಾಗಿ ಕೇಳಿದೆ. ಹೀಗೆ ಅವರು ಅದನ್ನು ತಿನ್ನದಂತೆ ಮಾಡಿದೆ. ಇವತ್ತು ನಿಮಗೆ ಅದನ್ನು ತಿನ್ನಿಸಿ, ಆ ಮೂಲಕ ಶ್ರೀಮಾತೆಯವರಿಗೆ ಕಡಲೆಪುರಿ ಮತ್ತು ಹುರಿಗಡಲೆ ತಿನ್ನಿಸಬೇಕೆಂದು ಇಚ್ಛೆಯಾಗುತ್ತಿದೆ.'' ಅವರು ಹಾಗೆ ಹೇಳಿ ಮುಗಿಸುವಷ್ಟರಲ್ಲೇ ರಾಜಾ ಮಹಾರಾಜ್ ನಗುತ್ತ, ''ತಂದು

ಕೊಡು, ಇವತ್ತು ಕಡಲೆಪುರಿ ಮತ್ತು ಹುರಿಗಡಲೆ ತಿಂದುಬಿಡುತ್ತೇನೆ'' ಎಂದರು.

ರಾಜಾ ಮಹಾರಾಜರು ಸಂತಸದಿಂದ ಕಡಲೆಪುರಿ, ಹುರಿಗಡಲೆ ತಿನ್ನುತ್ತಿದ್ದರು. ಶರತ್ ಮಹಾರಾಜ್ ತಮ್ಮ ಎದೆಯ ಮೇಲೆ ಕೈಯಿಟ್ಟುಕೊಂಡು, ಕಣ್ಣೀರಿಳಿಸುತ್ತಾ ಅವರು ತಿನ್ನುವುದನ್ನೇ ನೋಡುತ್ತಿದ್ದರು. ರಾಜಾ ಮಹಾರಾಜರು ತಿಂದು ಮುಗಿಸಿದಾಗ ಶರತ್ ಮಹಾರಾಜರ ಮುಖ ಬೆಳಗಿತು. ಶರತ್ ಮಹಾರಾಜರು ರಾಜಾ ಮಹಾರಾಜರ ಬಗ್ಗೆ ನಮಗೆ ಹಲವು ಬಾರಿ ಹೇಳಿದ್ದರು, ''ರಾಜಾ ಮಹಾರಾಜರಲ್ಲೇ ಠಾಕೂರ್ ಹಾಗೂ ಶ್ರೀಮಾತೆ ನೆಲೆಸಿದ್ದಾರೆ. ಅವರ ಸೇವೆ ಮಾಡುವುದೆಂದರೆ ಠಾಕೂರ್ ಹಾಗೂ ಶ್ರೀಮಾತೆಯವರ ಸೇವೆ ಮಾಡಿದಂತೆಯೇ ಎಂದು ನಂಬು.''

೧೯೨೨ನೇ ಇಸವಿಯ ಕೊನೆಯ ಭಾಗದಲ್ಲಿ ಶರತ್ ಮಹಾರಾಜರು ಕಾಶಿಗೆ ಹೋಗಿದ್ದರು. ಆಗ ನಾವೆಲ್ಲ ಢಾಕಾ ನಗರದಲ್ಲಿದ್ದೆವು. ಆ ಸಮಯದಲ್ಲೇ ಈ ಕೆಳಗಿನ ಘಟನೆ ನಡೆದಿತ್ತು. ಆಗ ಅವರ ಜೊತೆಯಲ್ಲಿದ್ದ ಸೇವಕರಿಂದ ಕೇಳಿದ್ದ ವಿಷಯಗಳನ್ನು ಯಥಾವತ್ತಾಗಿ ಬರಹಕ್ಕಿಳಿಸುತ್ತಿದ್ದೇನೆ:

ಒಂದು ದಿನ ಎರಡೂ ಆಶ್ರಮಗಳ[೧] ಸಾಧುಗಳೆಲ್ಲ ಶರತ್ ಮಹಾರಾಜರ ಬಳಿಗೆ ಬಂದು ಕುಳಿತು, ಅವರ ಮಾತುಗಳನ್ನು ಕೇಳುತ್ತಿದ್ದರು. ಒಬ್ಬರು ಸಾಧುಗಳು ಶರತ್ ಮಹಾರಾಜರನ್ನು ಕೇಳಿದರು: ''ಮಹಾರಾಜ್, —ಇಂಥವರು ಶ್ರೀಮಾತೆಯವರಿಂದ ದೀಕ್ಷೆ ಪಡೆದು ಸಂನ್ಯಾಸಿಯಾದರು; ಆದರೆ ಕೊನೆಗೆ ಅವರು ಮದುವೆ ಮಾಡಿಕೊಳ್ಳಬೇಕಾಯಿತಲ್ಲ – ಏಕೆ?'' ಈ ಮಾತನ್ನು ಕೇಳಿ, ಒಂದು ಸಣ್ಣ ಕಿಡಿಯಿಂದ ಸಿಡಿಮದ್ದಿನ ರಾಶಿ ಹೊತ್ತಿ ಸ್ಫೋಟಿಸುವಂತೆ, ಅಂತಹ ಸಹನೆ ಶಾಂತಿ, ಗಂಭೀರ ಸ್ವಭಾವಗಳಿಂದ ಕೂಡಿದ್ದ ಶರತ್ ಮಹಾರಾಜರು ಕೋಪದಿಂದ ಉರಿದೆದ್ದು ಕೇಳಿದರು: ''ಏನಂದೆ, ನೀನು?'' ಪ್ರಶ್ನೆ ಕೇಳಿದವರು ಅವರ ರೋಷಾವೇಶದ ಮುಂದೆ ತಲೆತಗ್ಗಿಸಿ ನಿಂತರು. ಶರತ್ ಮಹಾರಾಜರು ಆವೇಶದಿಂದ ಹೇಳತೊಡಗಿದರು: ''ಶ್ರೀಮಾತೆಯವರು ಎಂದು, ಯಾರಿಗೆ, ಯಾವ ಮಾರ್ಗದಲ್ಲಿ ಕರೆದುಕೊಂಡುಹೋಗುವರೋ ನಮಗಾರಿಗೂ ಗೊತ್ತಿಲ್ಲ. ಯಾರ, ಯಾವ ಆಸೆಗಳನ್ನು ಯಾವ ರೀತಿ ಪೂರೈಸಿ ಶ್ರೀಮಾತೆ ಹೇಗೆ ತನ್ನ ಮಕ್ಕಳ ಪಾಲಿಗೆ ಮುಕ್ತಿ ನೀಡುವರೋ, ಅದೂ ನಮಗಾರಿಗೂ ಗೊತ್ತಾಗುವುದಿಲ್ಲ. ಹೀಗಿರುವಾಗ ಯಾರು ಏನು ಮಾಡಿದರು, ಏನು ಮಾಡಲಿಲ್ಲ ಎಂದೆಲ್ಲ ಅತ್ತ ಗಮನ ಕೊಡದೆ, ಇತರರ ದೋಷಗಳನ್ನು ನೋಡದೆ, ಏನು ಮಾಡಿದರೆ ನಮ್ಮ ಮನಸ್ಸು ಠಾಕೂರರ ಹಾಗೂ ಶ್ರೀಮಾತೆಯವರ ಪಾದಪದ್ಮಗಳಲ್ಲಿ ನೆಲೆಸುವುದು ಅದಕ್ಕಾಗಿ ಹಗಲೂ ರಾತ್ರಿ ಪ್ರಾರ್ಥನೆ ಮಾಡುವುದೇ ನಮ್ಮ ಕರ್ತವ್ಯ. ನಾನಂತೂ ಅವನು ಕೆಟ್ಟವನು ಎಂದಾಗಲಿ, ಅನ್ಯಾಯ ಮಾಡಿದ ಎಂದಾಗಲಿ ಹೇಳಲಾರೆ, ಮನಸ್ಸಿನಲ್ಲೂ ಚಿಂತಿಸಲಾರೆ. ನಾನು, ನೀನು ಎಲ್ಲರೂ ಶ್ರೀಮಾತೆಯವರ ಕೈಹಿಡಿದು ಆಟವಾಡುತ್ತಿದ್ದೇವೆ. ಅವರಾದರೋ, ಯಾರಿಗೆ ಯಾವುದು ಇಷ್ಟವೋ ಆ ರೀತಿ ಆಡಿಸುತ್ತಿದ್ದಾರೆ. ಹೆಚ್ಚೇನು ಹೇಳಲಿ – ಗೂಟವನ್ನು ಹಿಡಿದು ಯಾರಿಗೆ ಯಾವ ರೀತಿ ಸುತ್ತಾಡಲು ಇಷ್ಟವೋ ಹಾಗೆ ಸುತ್ತಾಡಿ. ಆದರೆ ಎಚ್ಚರಿಕೆ! ಗೂಟವನ್ನು ಬಿಟ್ಟುಬಿಟ್ಟರೆ ಆಮೇಲೆ ಸುತ್ತಾಡಲಾರೆ, ಮುಳುಗಿ ಹೋಗುವೆ!'' ಸ್ವಲ್ಪ ಹೊತ್ತು ಸ್ತಬ್ಧರಾಗಿ ಸುಮ್ಮನಿದ್ದ ಬಳಿಕ ಗದ್ಗದ ಕಂಠದಿಂದ ಹೇಳತೊಡಗಿದರು: ''ಅವರ ಲೀಲೆ, ಅವರ ಆಟವನ್ನು ನಾನು ಸ್ವಲ್ಪವೂ ತಿಳಿದುಕೊಳ್ಳಲಾರದೆ ಹೋದೆ. ಜೀವನವಿಡೀ ಶ್ರಮಪಟ್ಟಿದ್ದರ ಫಲವಾಗಿ ಇಷ್ಟು ಮಾತ್ರ ಹೇಳಬಲ್ಲೆ– '' ಎನ್ನುತ ಅವರು ತಮ್ಮ ಮಾತನ್ನು ಮುಗಿಸಿದರು. ಅವರು ಮಧುರ ಕಂಠದಿಂದ ಹಾಡತೊಡಗಿದರು:

**ರಂಗಿನವಳ ರಂಗುನೋಡಿ ಬೆಚ್ಚಿಬಿದ್ದೆನು**
**ನಗಲೆ, ಅಳಲೆ ಎಂದು ಕುಳಿತು ಚಿಂತಿಸುತಿರುವೆ,**
**ಇನಿತು ಕಾಲ ಬಳಿಯಲಿದ್ದೆ, ಸುಳಿದಾಡಿದೆ ಹಿಂದೆ ಹಿಂದೆ**
**ಏನೊಂದೂ ತಿಳಿಯದಾದೆ, ಈಗ ಸೋಲನೊಪ್ಪಿಕೊಂಡೆ,**
**ಭವದಾಟವದೆನಿತು ಚಿತ್ರ – ಒಡೆದು ಜೋಡಿಸುವಳು ಸತತ**
**ಹಗಲು ರಾತ್ರಿ ಮಕ್ಕಳಾಟದಂತೆ – ಈಗ ತಿಳಿದೆನು!**

ಉದ್ಬೋಧನ, ೧೯೨೩ನೇ ಇಸವಿಯ ಜನವರಿ ೧ನೇ ತಾರೀಖು. ಕತ್ತಲಾದ ಮೇಲೆ ಶರತ್ ಮಹಾರಾಜ್ ಕೆಳಅಂತಸ್ತಿಗೆ ಇಳಿದು ಬಂದರು. ಸ್ವಲ್ಪ ಹೊತ್ತಿನ ನಂತರ ಭಕ್ತರೊಬ್ಬರು ಬಂದು ಪ್ರಣಾಮ ಮಾಡಿದರು. ಶರತ್ ಮಹಾರಾಜರು ಆ ಭಕ್ತರಲ್ಲಿ ಕುಶಲವೇ ಎಂದು ವಿಚಾರಿಸಿದರು. ಭಕ್ತರು ಅವರ ಪ್ರಶ್ನೆಗಳಿಗೆ ಉತ್ತರಿಸಿ, ಕೊನೆಗೆ ಹೇಳಿದರು: ''ಮಹಾರಾಜ್, ಶ್ರೀರಾಮಕೃಷ್ಣರು ಅವತಾರವಾಗಿದ್ದರೋ ಇಲ್ಲವೋ ಎಂಬ ವಿಷಯದಲ್ಲಿ ಅವರ ದಿವ್ಯ ಭಾವವನ್ನು ಕಂಡು ವಿಶ್ವಾಸ ತಾಳಬಲ್ಲೆ. ಆದರೆ ಶ್ರೀಮಾತೆಯವರು ಸಾಕ್ಷಾತ್ ಭಗವತಿ ಎಂಬ ವಿಷಯವನ್ನು ಮನಸ್ಸಿನಲ್ಲಿ ಭಾವಿಸಲಾಗುತ್ತಿಲ್ಲ, ಏಕೆ?'' ಶರತ್ ಮಹಾರಾಜ್ ಹೇಳಿದರು: ''ಶ್ರೀರಾಮಕೃಷ್ಣರನ್ನು ಭಗವಂತ ಎಂಬುದಾಗಿ ನೀನು ನಂಬುವುದು ಸಾಧ್ಯವಾಗಿದ್ದರೆ, ನಿನಗೆ ಈ ಸಂದೇಹ ಯಾಕೆ ಬಂತು?''

ಭಕ್ತರು ಶಾಂತ ಭಾವದಿಂದ ಹೇಳಿದರು: ''ಮಹಾರಾಜ್, ನನ್ನ ಈ ಸಂದೇಹ ಏನು ಮಾಡಿದರೂ ದೂರವಾಗುತ್ತಿಲ್ಲ.'' ಆಗ ಶರತ್ ಮಹಾರಾಜ್ ಹೇಳಿದರು: ''ಹಾಗಿದ್ದರೆ ಹೇಳು, ಶ್ರೀರಾಮಕೃಷ್ಣರು ಅವತಾರ ಪುರುಷರು ಎಂದು ನಿನಗೆ ಇನ್ನೂ ದೃಢವಾಗಿ ನಂಬಿಕೆ ಬಂದಿಲ್ಲವೆ?'' ಭಕ್ತರು ವಿನೀತಭಾವದಿಂದ ಹೇಳಿದರು, ''ಇಲ್ಲ ಮಹಾರಾಜ್, ಠಾಕೂರರ ಬಗ್ಗೆ ಆ ವಿಷಯವಾಗಿ ನನಗೆ ಅಂಥ ನಂಬಿಕೆಯಿದೆ.'' ಶರತ್ ಮಹಾರಾಜ್ ದೃಢವಾದ ಸ್ವರ

೧ ವಾರಾಣಸಿ ಸೇವಾಶ್ರಮ ಮತ್ತು ವಾರಾಣಸಿ ಅದ್ವೈತ ಆಶ್ರಮ; ಅಕ್ಕಪಕ್ಕದಲ್ಲಿವೆ.

ದಿಂದ ಹೇಳಿದರು, ''ಹಾಗಿದ್ದರೆ, ಭಗವಂತನು ಒಬ್ಬಾಕೆ ಬೆರಣಿ ಎತ್ತುವ ಹೆಂಗಸನ್ನು ಮದುವೆಯಾದನು ಎಂದು ನಿನ್ನ ನಂಬಿಕೆಯೆ?'' ಭಕ್ತರು ಮೆಲ್ಲಮೆಲ್ಲನೆ ಮುಂದೆ ಬಂದು, ಶರತ್ ಮಹಾರಾಜರಿಗೆ ಪ್ರಣಾಮ ಮಾಡಿ, ಆನಂದಗೊಂಡು ಹೇಳಿದರು – ''ನನ್ನ ಸಂದೇಹ ದೂರವಾಯಿತು, ನನ್ನ ಸಂದೇಹ ದೂರವಾಯಿತು.''

ಶರತ್ ಮಹಾರಾಜರು ಹೇಳಿದ್ದನ್ನು ಅನೇಕ ಮಂದಿ ಕೇಳಿಸಿಕೊಂಡಿದ್ದರು. ಆದರೆ 'ಸಾವಿರ ವರ್ಷ ಕತ್ತಲಿನಿಂದ ತುಂಬಿದ ಕೋಣೆಯು' ಶ್ರೀರಾಮಕೃಷ್ಣರು ಹೇಳುವಂತೆ, ''ಒಬ್ಬ ಗ್ರಾಮೀಣ ವ್ಯಕ್ತಿಯ ಕಟ್ಟಿಗೆಯಿಂದ ಬೆಳಕಾಗಿ ಬಿಡುವುದು'' – ಅದೇ ರೀತಿ, ಆ ಭಕ್ತರ ಸಂದೇಹವೆಲ್ಲವೂ ಶರತ್ ಮಹಾರಾಜರ ಒಂದೇ ಮಾತಿನಿಂದ ದೂರವಾಗಿದ್ದಿರಬೇಕು. ಅಥವಾ, ಜನರ ಕಣ್ಣಿನಲ್ಲಿ ಯಾವುದೋ ಒಂದು ಹೊಸ ನೋಟ ಕಂಡುಬಂತೋ ಅದಕ್ಕಾಗಿ ಆ ಭಕ್ತರು ಆನಂದದಿಂದ 'ಮಹಾರಾಜ್, ನನ್ನ ಸಂದೇಹ ದೂರವಾಯಿತು' ಎಂದು ಹೇಳಿದ್ದಿರಬೇಕು. ನನಗೆ ಸ್ಪಷ್ಟವಾಗಿ ಗೊತ್ತಾಗಲಿಲ್ಲ. ನಾವು ನೋಡಿದೆವು – ಶರತ್ ಮಹಾರಾಜರು ಗಂಭೀರ ಭಾವ ತಾಳಿ, ದೀಪ್ತವಾದ ಮುಖದಿಂದ ಕುಳಿತಿದ್ದರು. ಭಕ್ತರ ಕಣ್ಣುಗಳು ಆನಂದದಿಂದ ಮುಚ್ಚಿಕೊಂಡಿದ್ದವು. ಅಂದು ಯಾರೂ ಬೇರೆ ಯಾವ ಮಾತುಗಳನ್ನೂ ಆಡಲಿಲ್ಲ. ಎಲ್ಲರೂ ಧ್ಯಾನಮಗ್ನರಾಗಿದ್ದಂತೆ, ಬಾಹ್ಯಜಗತ್ತಿನೊಂದಿಗೆ ಸಂಪರ್ಕವನ್ನು ಕಳೆದುಕೊಂಡು, ಬೇರೆ ಯಾವ ಮಾತನ್ನೂ ಆಡಬಯಸದೆ ಇದ್ದಂತಿದ್ದರು.

*(ಸಮಾಪ್ತಿ)*

*ಸಂಗ್ರಹ: ಸ್ವಾಮಿ ಪೂರ್ಣಾತ್ಮಾನಂದ*
*ಕೃಪೆ: ಬ್ರಹ್ಮಗೋಪಾಲ ದತ್ತ*

## ಟಿಬೆಟ್ಟಿನಲ್ಲಿ ಸ್ವಾಮಿ ಅಖಂಡಾನಂದರು

ಕೇದಾರನಾಥದಿಂದ ಗಂಗಾಧರನು (ಸ್ವಾಮಿ ಅಖಂಡಾನಂದರು) ಬದರೀನಾಥಕ್ಕೆ ತೆರಳಿದನು. ಇಲ್ಲಿಯೇ ವ್ಯಾಸರು ವೇದಗಳನ್ನು ವಿಂಗಡಿಸಿದ್ದು, ಪುರಾಣಗಳನ್ನು ಬರೆದದ್ದು; ಶಂಕರರು ಗೀತೆ ಉಪನಿಷತ್ತುಗಳ ಮೇಲೆ, ಬ್ರಹ್ಮಸೂತ್ರಗಳ ಮೇಲೆ ತಮ್ಮ ಭಾಷ್ಯವನ್ನು ಬರೆದದ್ದು. ಇದು ತಪಸ್ಸು ಮಾಡಲು ಹೇಳಿ ಮಾಡಿಸಿದಂತಹ ತಾಣ. ಗಂಗಾಧರನು ಆ ಆಧ್ಯಾತ್ಮಿಕ ನೆಲೆಯಲ್ಲಿ ಕೆಲವು ದಿನಗಳಿದ್ದು, ಅನಂತರ ಮಾನ ಪಾಸ್ ಮೂಲಕ ಟಿಬೆಟ್ಟಿಗೆ ಹೋಗುವ ನಿರ್ಧಾರ ಮಾಡಿದ. ಮಾನ ಗ್ರಾಮದ ಪಟೇಲ ಶೇರ್ ಸಿಂಗ್ ಆ ಪಯಣ ತುಂಬ ಅಪಾಯಕಾರಿ ಎಂದೂ, ಆ ದಾರಿಯಲ್ಲಿ ಹೋದ ಅನೇಕರು ಸತ್ತಿರುವರೆಂದೂ ಎಚ್ಚರಿಸಿದ. ಗಂಗಾಧರನು ಹೊರಡುವುದಕ್ಕೆ ಮುನ್ನ ಮಾನ ಗ್ರಾಮಕ್ಕೆ ವ್ಯಾಪಾರಕ್ಕಾಗಿ ಬಂದಿದ್ದ ಟಿಬೆಟ್ಟಿನ ತೂಲಿಂಗ್ ಬೌದ್ಧ ಸಂನ್ಯಾಸಿ ಮಠದ ಅಧಿಕಾರಿಯೊಬ್ಬನ ಪರಿಚಯವಾಯಿತು. ಈತನ ಜೊತೆಗೆ ಟಿಬೆಟ್ಟಿಗೆ ಹೊರಟ ಗಂಗಾಧರನಿಗೆ ಮಾರ್ಗಮಧ್ಯದಲ್ಲಿ ಆ ಅಧಿಕಾರಿ ತೂಲಿಂಗ್ ಮಠದ ದಿಕ್ಕನ್ನು ತೋರಿಸಿ, ತನ್ನ ಪಾಡಿಗೆ ತಾನು ಎಲ್ಲಿಯೋ ಹೊರಟುಹೋದ. ಆ ಪ್ರಯಾಣ ಅದೆಷ್ಟು ಕಠಿಣವಾಗಿತ್ತೆಂದರೆ, ಆ ಮಠವನ್ನು ತಲುಪುವ ಹೊತ್ತಿಗೆ ಗಂಗಾಧರನು ಹಿಮದ ಮೇಲೆ ಪ್ರಜ್ಞಾಶೂನ್ಯನಾಗಿ ಬೀಳುವಂತಾಯಿತು. ಮಾರನೆಯ ಬೆಳಗ್ಗೆ ಅಕಸ್ಮಾತ್ತಾಗಿ ಗಂಗಾಧರನನ್ನು ಗಮನಿಸಿದ ಸಂನ್ಯಾಸಿಯೊಬ್ಬನು ಅವನನ್ನು ಮಠಕ್ಕೆ ಎತ್ತಿಕೊಂಡು ಹೋದ. ಲಾಮಾಗಳೆಲ್ಲ ಸೇರಿ ಅವನ ಶರೀರವನ್ನು ಬೆಚ್ಚಗಾಗಿಸಿ ಜೀವ ಉಳಿಸಿದರು. ಗಂಗಾಧರನಲ್ಲಿ ಅವರು ಅಸ್ಖಲಿತ ಬ್ರಹ್ಮಚರ್ಯದ ಸಂನ್ಯಾಸಿಯ ಲಕ್ಷಣವನ್ನು ಕಂಡುಹಿಡಿದರು. ಅವನೊಂದಿಗೆ ಇರುತ್ತಿದ್ದ ಶ್ರೀರಾಮಕೃಷ್ಣರ ಭಾವಚಿತ್ರವನ್ನು ನೋಡಿದ ಒಬ್ಬ ಲಾಮಾ ಉದ್ಗರಿಸಿದ: ''ಯಾರೀತ? ಈ ಕಣ್ಣುಗಳು ಸಾಮಾನ್ಯ ಮಾನವನದಲ್ಲ. ಈ ಮನುಷ್ಯ ಒಬ್ಬ ಬುದ್ಧನಾಗಿರಬೇಕು.''



ಕೈಲಾಸ, ಮಾನಸ ಸರೋವರ

ಮಾರನೆಯ ವರ್ಷ ಗಂಗಾಧರನು ಮತ್ತೆ ಟಿಬೆಟ್ಟಿಗೆ ಹೋದ. ಈ ಬಾರಿ ಲಾಸಾಕ್ಕೆ ಹೋಗುವಾಗ ಅವನನ್ನು ಬಂಧಿಸಿದರು; ಆದರೆ ವ್ಯಾಪಾರಿ ಗೆಳೆಯರು ಅವನನ್ನು ಬಿಡಿಸಿದರು. ಆ ನಂತರ ಗಂಗಾಧರನು ಕೈಲಾಸ ಪರ್ವತ ಮತ್ತು ಮಾನಸ ಸರೋವರಗಳ ಯಾತ್ರೆ ಮಾಡಿದ. ಮಂಜು ಮುಸುಕಿದ ಕೈಲಾಸ ಪ್ರಕೃತಿನಿರ್ಮಿತ ಶಿವನ ರೂಪದಂತಿದೆ; ಮಾನಸ ಸರೋವರ ಐವತ್ತು ಮೈಲಿ ಪರಿಧಿಯುಳ್ಳ ಒಂದು ದೊಡ್ಡ ಸರೋವರ. ಇದರ ಸುತ್ತ ಎಂಟು ಬೌದ್ಧ ಸಂನ್ಯಾಸಿ ಮಠಗಳಿವೆ. ಒಬ್ಬ ಬೌದ್ಧ ಸಂನ್ಯಾಸಿ ಗಂಗಾಧರನಿಗೆ ಮೈಶಾಖವನ್ನು ಹಿಡಿದಿಟ್ಟುಕೊಂಡಿರುವಂತಹ ಆಸನವೊಂದನ್ನು ಕಲಿಸಿದ. ''ಈ ಆಸನದಲ್ಲಿ ಕುಳಿತಿದ್ದು ನಾನೇನು ಮಾಡಬೇಕು?'' ಎಂದು ಗಂಗಾಧರನು ಕೇಳಿದ್ದಕ್ಕೆ ಆ ಸಂನ್ಯಾಸಿ ''ಏನೂ ಮಾಡುವುದು ಬೇಡ; ಸುಮ್ಮನೆ ಮನಸ್ಸನ್ನು ಶೂನ್ಯವಾಗಿಸಿಕೊ'' ಎಂದ. ಕೈಲಾಸಕ್ಕೆ ಹೋಗುವ ದಾರಿಯಲ್ಲಿ ಕಳ್ಳರು ಗಂಗಾಧರನ ಮೇಲೆ ಬಿದ್ದರು; ಅವರಿಗೆ ತನ್ನಲ್ಲಿದ್ದ ಅವಲಕ್ಕಿ ಕಾಕಂಬಿಗಳನ್ನು ಕೊಟ್ಟು ಅವನು ತನ್ನ ಜೀವ ಉಳಿಸಿಕೊಳ್ಳಬೇಕಾಯಿತು. ಹಿಂದಿರುಗಿ ಬರುವಾಗ ಚಕ್ರ ಗ್ರಾಮದಲ್ಲಿ ತಂಗಿದ ಗಂಗಾಧರನು ಶ್ರೀಮಂತ ಅಲೆಮಾರಿಯೊಬ್ಬನ ಅತಿಥಿಯಾದ, ಒಂದು ದಿನ ಈ ಆತಿಥೇಯ ಗಂಗಾಧರನ ಹಾಸಿಗೆಯ ಬಳಿ ಶ್ರೀರಾಮಕೃಷ್ಣರ ಭಾವಚಿತ್ರವನ್ನು ನೋಡಿದ. ಅವನು ಅದನ್ನು ಮುಟ್ಟುತ್ತಲೇ ಪ್ರಜ್ಞಾಶೂನ್ಯನಾದ. ಬಾಹ್ಯಪ್ರಜ್ಞೆ ಬಂದಮೇಲೆ ಗಂಗಾಧರನನ್ನು ಕೇಳಿದ: ''ಈ ಚಿತ್ರ ನಿನಗೆಲ್ಲಿ ಸಿಕ್ಕಿತು? ದಯವಿಟ್ಟು ಅದನ್ನು ನನಗೆ ಕೊಡು. ನಾನು ಅವರನ್ನು ಪ್ರತಿನಿತ್ಯ ಪೂಜಿಸುತ್ತೇನೆ. ಈತನೊಬ್ಬ ಬುದ್ಧನಾಗಿರಬೇಕು ಇಲ್ಲವಾದರೆ ಸ್ಪರ್ಶಿಸಿದೊಡನೆ ನಾನು ಹೇಗೆ ಮೈಮರೆಯುತ್ತಿದ್ದೆ? ಸಾಮಾನ್ಯ ಮನುಷ್ಯನೊಬ್ಬನಿಗೆ ಈ ಮುಖಭಾವವಿರುವುದು ಸಾಧ್ಯವಿಲ್ಲ''.

*('ದೇವರೊಡನೆ ಬಾಳಿದವರು', ಸ್ವಾಮಿ ಚೇತನಾನಂದ, ಸಂ.೧, ಪು.೬೬೪–೬೬)*